<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 81/2020**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ ರವಿ ಟಿ. | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ತಿಪ್ಪೇಶಪ್ಪ | 8 | 3 |
| ವಯಸ್ಸು | 37 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **27.02.2026.** | |
| ಉದ್ಯೋಗ | ಹೆಚ್.ಸಿ-216 ರಾಮನಗರ ಟೌನ್ ಪೊಲೀಸ್ ಠಾಣೆ | | |
| ವಾಸ ಸ್ಥಳ | ಬಿಡದಿ | | |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ 2013 ರಿಂದ 2017 ರವರೆಗೆ ಪೇದೆಯಾಗಿ ಕೆಲಸ ಮಾಡಿದ್ದೇನೆ.

ದಿನಾಂಕ 12.07.2015 ರಂದು ನಾನು ರಾತ್ರಿ ಗಸ್ತು ಕರ್ತವ್ಯಕ್ಕೆ ನೇಮಕವಾಗಿದ್ದು, ರಾತ್ರಿ 9.00 ಗಂಟೆಗೆ ಠಾಣೆಯಲ್ಲಿದ್ದಾಗ, ಪಿಎಸ್ಐ ಹರೀಶ್ ರವರು ನನಗೆ ಮತ್ತು ಇತರೆ ಸಿಬ್ಬಂದಿಗಳಾದ ಮಂಜುನಾಥ್, ಮುನಿರಾಜು, ವಿಶ್ವನಾಥ್, ನರಿಯಪ್ಪ ಕಂಡೋಜಿ ರವರನ್ನು ಕರೆದು, ರಾಹುಗುಡಲು ಪೈಪ್ ಲೈನ್ ರಸ್ತೆಯಲ್ಲಿ ಯಾರೋ ಐದು ಜನ ಲಾಂಗ್ ಮತ್ತು ದೊಣ್ಣೆಗಳನ್ನು ಹಿಡಿದುಕೊಂಡು ಸಾರ್ವಜನಿಕರಿಗೆ ಬೆದರಿಕೆ ಹಾಕಿ ಅವರಿಂದ ಹಣ ಮತ್ತು ಒಡವೆಗಳನ್ನು ದೋಚಲು ಹೊಂಚು ಹಾಕುತ್ತಿರುವುದಾಗಿ ಖಚಿತ ಮಾಹಿತಿ ಬಂದಿದ್ದು, ಅದಕ್ಕೆ ದಾಳಿ ಮಾಡಬೇಕೆಂದು ನಮಗೆ ವಿಷಯ ತಿಳಿಸಿದರು. ಅದರಂತೆ ಪಿಎಸ್ಐ, ನಾವು ಸಿಬ್ಬಂದಿ ಮತ್ತು ಪಂಚರು ರಾಹುಗುಡಲು ಪೈಪ್ ಲೈನ್ ರಸ್ತೆಗೆ ಸರ್ಕಾರಿ ಜೀಪ್ ನಲ್ಲಿ ಹೋಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಮರೆಯಲ್ಲಿ ನೋಡಿದಾಗ ನಾಲ್ಕೈದು ಜನ ಲಾಂಗ್ ಮತ್ತು ದೊಣ್ಣೆಗಳನ್ನು ಹಿಡಿದುಕೊಂಡು ಕೈಸನ್ನೆ ಮಾಡುತ್ತಾ ಮಾತನಾಡಿಕೊಳ್ಳುತ್ತಿದ್ದು ಕಾಣಿಸಿತು. ಅವರನ್ನು ಹಿಡಿಯುವಂತೆ ಪಿಎಸ್ಐ ರವರು ಮತ್ತು ಸಿಬ್ಬಂದಿಗಳು ಸೇರಿ ದಾಳಿ ಮಾಡಿ ಅದರಲ್ಲಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿಹೋದ. ಉಳಿದ ನಾಲ್ಕು ಜನರನ್ನು ಹಿಡಿದುಕೊಂಡೆವು. ಅವರ ಹೆಸರು ವಿಳಾಸ ವಿಚಾರಿಸಲಾಗಿ, ಮುತ್ತುರಾಜ್, ಮಿಥುನ್, ಅರುಣ್ ಮತ್ತು ವೆಂಕಟೇಶ್ ಎಂದು

ತಿಳಿಸಿದರು. ಓಡಿಹೋದವನ ಹೆಸರು ಕೇಳಿದಾಗ ಗುಂಡ ಅಲಿಯಾಸ್ ಗುಂಡಪ್ಪ ಎಂದು ಹೇಳಿದರು. ಮುತ್ತುರಾಜ್ ಕೈಯಲ್ಲಿ ಕಬ್ಬಿಣದ ಲಾಂಗ್, ಅರುಣ್ ಮತ್ತು ವೆಂಕಟೇಶ್ ರವರ ಕೈಯಲ್ಲಿ ಒಂದೊಂದು ದೊಣ್ಣೆ ಮತ್ತು ಮಿಥುನ್ ಪ್ಯಾಂಟ್ ಜೇಬಿನಲ್ಲಿ ಖಾರದ ಪುಡಿ ಪೊಟ್ಟಣಗಳು ಇದ್ದವು. ಅವರುಗಳು ಎರಡು ಹೀರೋ ಹೊಂಡಾ ಸ್ಪ್ಲೆಂಡರ್ ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಸದರಿ ವಸ್ತುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡೆವು. ನ್ಯಾಯಾಲಯದ ಮುಂದಿರುವ ಕಬ್ಬಿಣದ ಲಾಂಗ್, ಎರಡು ದೊಣ್ಣೆಗಳು, ಮೂರು ಖಾರದ ಪುಡಿ ಪೊಟ್ಟಣಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಮು ಮಾ 1 ರಿಂದ 6 ಎಂದು ಗುರುತಿಸಲಾಯಿತು. ಸದರಿ ಮೋಟಾರ್ ಸೈಕಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರಾದ ವೆಂಕಟೇಶ್ ಮತ್ತು ಗುಂಡಪ್ಪನನ್ನು ಸಾಕ್ಷಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ಗುರುತಿಸುವ ಬಗ್ಗೆ ವಕೀಲರು ಆಕ್ಷೇಪಣೆ ಇಲ್ಲವೆಂದು ಹೇಳಿರುತ್ತಾರೆ. ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ.ಹೆಚ್.ಎಂ.ಕೆ. ವಕೀಲರಿಂದಃ</u>

ರಾಹುಗುಡಲು ರಸ್ತೆಯ ಮುಖ್ಯರಸ್ತೆಯಲ್ಲಿ ಪೈಪ್ ಲೈನ್ ರಸ್ತೆ ಇದೆ ಎಂದರೆ ಸರಿ. ಸೋಮನಹಳ್ಳಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಪೈಪ್ ಲೈನ್ ರಸ್ತೆ ಇದೆ ಎಂದರೆ ಸರಿಯಲ್ಲ. ಬೆಂಗಳೂರಿನಿಂದ ಕನಕಪುರಕ್ಕೆ ಮತ್ತು ಕನಕಪುರದಿಂದ ಬೆಂಗಳೂರಿಗೆ ಹೋಗುವವರು ರಾಹುಗುಡಲಕ್ಕೆ ಹೋಗುವ ಅವಶ್ ಯಕತೆ ಇಲ್ಲ ಎಂದರೆ ಸರಿಯಲ್ಲ. ಪಂಚರನ್ನು ಪಿಎಸ್ಐ ಕರೆಸಿದ್ದರು. ನನಗೆ ರಾತ್ರಿ 9 ಗಂಟೆಗೆ ಮಾಹಿತಿ ಬಂತು. ಸ್ಥಳಕ್ಕೆ ಹೋದಾಗ ರಾತ್ರಿ 9.45 ಗಂಟೆಯಾಗಿತ್ತು. ಅವರುಗಳು ಮಾತನಾಡಿಕೊಂಡಿದ್ದು ಸ್ಪಷ್ಟವಾಗಿ ಕೇಳಿಸಲಿಲ್ಲ. ನಾವು ಸ್ಥಳಕ್ಕೆ ಹೋದಾಗ ಕತ್ತಲಾಗಿತ್ತು ಎಂದರೆ ಸರಿ. ಯಾರು ಯಾರು ಯಾವ ರೀತಿ ಬಟ್ಟೆ ಹಾಕಿದ್ದರು ಎಂದು ಹೇಳಲು ಬರುವುದಿಲ್ಲ. ಯಾರು ಯಾರು ಯಾವ ಆರೋಪಿತರನ್ನು ಹಿಡಿದುಕೊಂಡರು ಎಂದು ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಷಯ ಗೊತ್ತು. ಪಂಚನಾಮೆಯನ್ನು ಟೈಪ್ ಮಾಡಿದ್ದು, ಅದರಲ್ಲಿ ನನ್ನ ಸಹಿ ಇಲ್ಲ. ನಾನು ಆ ದಿನ ಕರ್ತವ್ಯದಲ್ಲಿ ಇರಲಿಲ್ಲ ಮತ್ತು ದಾಳಿಗೆ ಹೋಗಿಲ್ಲ ಹಾಗೂ ಮೇಲಧಿಕಾರಿಗಳಿಗೆ ಸಹಾಯ ಆಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**SC No. 81/2020**
**P.W.3**

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.